**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ. 658/2016</u>**

**<u>ಸಿ.ಡಬ್ಲ್ಯೂಃ 4 ಪಿ.ಡಬ್ಲ್ಯೂಃ 2</u>**

ಸಾಕ್ಷಿದಾರನ ಹೆಸರು : ಮಲ್ಲಯ್ಯ
ತಂದೆಯ ಹೆಸರು : ಲೇ ಪಂಪಯ್ಯ
ವಯಸ್ಸು : 56 ವರ್ಷ
ಕೆಲಸ : ಪಿ ಎಸ್ ಐ, ಸಿರುಗುಪ್ಪ ಪಿ ಎಸ್
ವಾಸ : ಸಿರುಗುಪ್ಪ

**ದಂಡ ಪಕ್ರಿಯಾ ಸಂಹಿತೆ ಕಲಂ 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆ**

**<u>ಸಾಕ್ಷಿಗೆ ದಿನಾಂಕಃ 17.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ನಾನು 05.10.2010 ರಿಂದ 26.09.2016 ರವರೆಗೂ ಹಚ್ಚೋಳ್ಳಿ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 16.10.2015 ರಂದು ರಾತ್ರಿಃ 10.00 ಗಂಟೆಗೆ ಚಾಸಾ 1 ರವರ ಜೊತೆ ನಾನು, ಚಾಸಾ 5 ರಿಂದ 7 ರವರೊಂದಿಗೆ ರಾತ್ರಿ ಗಸ್ತು ಮಾಡುತ್ತಿದ್ದಾಗ ರಾಃ 01.00 ಗಂಟೆಗೆ ನಾವು ಹಚ್ಚೋಳ್ಳಿ ಬಸ್ ನಿಲ್ದಾಣದ ಬಳಿ ಇದ್ದಾಗ ಒಬ್ಬ ವ್ಯಕ್ತಿ ನೀಲಿ ಬಣ್ಣದ ಮೋಟಾರ್ ಸೈಕಲ್ ನಂ ಕೆ ಎ 25 ಇ 7582 ನೇದ್ದರಲ್ಲಿ ಬರುತ್ತಿದ್ದನು. ಆತನನ್ನು ನಿಲ್ಲಿಸಿ ವಿಚಾರಿಸಿದಾಗ ಸಮರ್ಪಕ ಉತ್ತರ ನೀಡಲಿಲ್ಲ. ನಂತರ ಆತನನ್ನು ವಶಕ್ಕೆ ಪಡೆದು ಚಾಸಾ 2 ಮತ್ತು 3 ರವರನ್ನು ಕರೆಯಿಸಿಕೊಂಡು ಪಂಚರಾಗಿ ನೇಮಕ ಮಾಡಿ ಚಾಸಾ 1 ವಿಚಾರಣೆ

ಮಾಡಿದರು. ಸದರಿ ವ್ಯಕ್ತಿ ಹೆಸರು ನಾಗಭೂಷಣ ಅಲಿಯಾಸ ನಾಗೇಶ ಎಂದು ಹೇಳಿದನು. ಮೋಟಾರ್ ಸೈಕಲ್ ನ್ನು ರಾಯಚೂರು ನಗರದ ನವೋದಯ ಆಸ್ಪತ್ರೆ ಬಳಿ ಕಳ್ಳತನ ಮಾಡಿ ಮಾರಾಟ ಮಾಡಲು ತರುತ್ತಿರುವುದಾಗಿ ತಿಳಿಸಿದನು. ಚಾಸಾ 1 ರವರು ಆತನನ್ನು ವಶಕ್ಕೆ ಪಡೆದು ಸ್ಥಳದಲ್ಲಿ ಪಂಚನಾಮೆ ಮಾಡಿದೆವು. ಸದರಿ ಪಂಚನಾಮೆ ನಾನೇ ಬರೆದೆನು. ನಂತರ ಠಾಣೆಗೆ ಕರೆತಂದರು ಹಾಗೂ ದೂರು ದಾಖಲು ಮಾಡಿದರು.

3. ಸಾಕ್ಷಿಯು ಆರೋಪಿ ಹಾಗೂ ಮಾಲು ಜಪ್ತ ಪಂಚನಾಮೆಯಲ್ಲಿದ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿಃ 1 ಎಂದು ಹಾಗೂ ಸದರಿ ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು. ನಂತರ ಚಾಸಾ 1 ಆರೋಪಿಯ ಸ್ವ ಖುಷಿ ಹೇಳಿಕೆಯನ್ನು ಪಡೆದರು. ತನ್ನ ಜೊತೆ ಬಂದರೆ ಕಳವು ಮಾಡಿದ ಇತರೆ ಮೋಟಾರ್ ಸೈಕಲ್ ತೋರಿಸುವುದಾಗಿ ಹೇಳಿದನು. ನಾವು ಕೌತಳಂ ಮಂಡಲದ ಮದಲಗುಂಟೆ ಗ್ರಾಮಕ್ಕೆ ಹೋಗಿ ಸಿದ್ರಾಮಪ್ಪ ಮನೆ ಹತ್ತಿರ ಹೋಗಿ ಆರೋಪಿ ತಾನು ಯಾದಗಿರಿ ರೈಲ್ವೆ ಸ್ಟೇಷನ್ ಬಳಿ ಕಳವು ಮಾಡಿದ್ದು ಎಂದು ತೋರಿಸಿದಂತೆ ಹಿರೋ ಹೊಂಡ ಸ್ಪಲೆಂಡರ್ ಕೆ ಎ 23 ಜೆ 7176 ನೇದ್ದು ಇದ್ದು ಚಾಸಾ 1 ಅದನ್ನು ಜಪ್ತ ಮಾಡಿದರು. ಸದರಿ ವಾಹನವನ್ನು ಆರೋಪಿಯು ಸುಮಾರು ಒಂದು ತಿಂಗಳ ಬಳಿ ಸಿದ್ರಾಮಪ್ಪನ ಬಳಿ 4 ಸಾವಿರ ಹಣವನ್ನು ಪಡೆದನು ಎಂದು ಸಿದ್ರಾಮಪ್ಪ ತಿಳಿಸಿದನು. ನಂತರ ಆರೋಪಿ ಇನ್ನೊಂದು

ಮನೆಯನ್ನು ತೋರಿಸಿ ಅಲ್ಲಿ ಇದ್ದ ಕೆ ಎ 35 ಎಸ್ 2090 ವಾಹವನವನ್ನು ತೋರಿಸಿ ಹೋಸಪೇಟೆಯ ರೈಲ್ವೇ ಸ್ಟೇಷನ್ ಮುಂದೆ ಒಂದುವರೆ ತಿಂಗಳ ಹಿಂದೆ ಕಳವು ಮಾಡಿ ಲಕ್ಷ್ಮಣ ಎನ್ನುವವರ ಬಳಿ ರೂ. 10,000/- ಕ್ಕೆ ಗಿರವಿ ಇಟ್ಟಿರುವುದಾಗಿ ತಿಳಿಸಿದನು. ಚಾಸಾ 1 ಸದರಿ ವಾಹನವನ್ನು ಜಪ್ತ ಮಾಡಿದರು. ಸ್ಥಳದಲ್ಲಿ 12.30 ರಿಂದ 01.30 ರವರೆಗೆ ಪಂಚನಾಮೆ ಮಾಡಲಾಯಿತು. ಪಂಚನಾಮೆ ನಾನೇ ಬರೆದೆನು. ಸಾಕ್ಷಿಯು ಆರೋಪಿ ಹಾಗೂ ಮಾಲು ಜಪ್ತ ಪಂಚನಾಮೆಯಲ್ಲಿದ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿಃ 2 ಎಂದು ಹಾಗೂ ಸದರಿ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು.

4. ನಂತರ ಆರೋಪಿ ತೋರಿಸಿದ ಪ್ರಕಾರ ಹಾಲ್ವಿ ಗ್ರಾಮಕ್ಕೆ ಹೋಗಿ ರಾಜಸ್ವಾಮಿ ರವರ ಮನೆಯ ಮುಂದೆ ನಿಂತಿದ್ದ ವಾಹನ ತೋರಿಸಿ ಅದನ್ನು ತಾನು ರಾಯಚೂರು ನಗರದ ತರಕಾರಿ ಮಾರುಕಟ್ಟೆ ಬಳಿ ಕಳವು ಮಾಡಿ 2 ಸಾವಿರ ರೂಪಾಯಿಗೆ ಗಿರವಿ ಇಟ್ಟಿರುವುದಾಗಿ ತಿಳಿಸಿದನು. ಚಾಸಾ 1 ಸದರಿ ವಾಹನವನ್ನು ಜಪ್ತ ಮಾಡಿದರು. ಸ್ಥಳದಲ್ಲಿ 02.15 ರಿಂದ 03.15 ರವರೆಗೆ ಪಂಚನಾಮೆ ಮಾಡಲಾಯಿತು. ಪಂಚನಾಮೆ ನಾನೇ ಬರೆದೆನು. ಸಾಕ್ಷಿಯು ಆರೋಪಿ ಹಾಗೂ ಮಾಲು ಜಪ್ತ ಪಂಚನಾಮೆಯಲ್ಲಿದ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿಃ 3 ಎಂದು ಹಾಗೂ

ಸದರಿ ಸಹಿಯನ್ನು ನಿಪಿಃ 3(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ತನಿಖಾಧಿಕಾರಿಗೆ 1 ರವರಿಗೆ ಹೇಳಿಕೆ ನೀಡಿದ್ದೆನೆ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**